ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

34

ಇಲಾಖೆ / ವಿಷಯ : DEPARTMENT / SUBJECT: ____________

ಪತ್ರಿಕೆಯ ಹೆಸರು : NAME OF THE NEWS PAPER: ____________ ದಿನಾಂಕ : DATE : 13/2/21

# ಮಲ್ಲಿಕಾರ್ಜುನ ಖರ್ಗೆಗೆ ಪ್ರತಿಪಕ್ಷ ನಾಯಕ ಸ್ಥಾನ

ನವದೆಹಲಿ: ಹಿರಿಯ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜ್ಯಸಭೆಯ ಪ್ರತಿಪಕ್ಷ
ನಾಯಕ ಸ್ಥಾನ ಒಲಿದಿದೆ. ಇದೇ 15ರಂದು ಹಾಲಿ ಪ್ರತಿಪಕ್ಷ ನಾಯಕ ಗುಲಾಂ ನಬಿ
ಆಜಾದ್ ಅವರು ನಿವೃತ್ತಿಯಾಗಲಿದ್ದು, ಇವರ ಸ್ಥಾನವನ್ನು ಖರ್ಗೆ ತುಂಬಲಿ
ದ್ದಾರೆ. ಮೋದಿ ಸರ್ಕಾರ್ 1ರಲ್ಲಿ ಲೋಕಸಭೆಯಲ್ಲಿ ಕಾಂಗ್ರೆಸ್ ಸಂಸದೀಯ
ನಾಯಕರಾಗುವ ಮೂಲಕ, ಪ್ರತಿಪಕ್ಷ ನಾಯಕರಂತೆಯೇ ಜವಾಬ್ದಾರಿ
ನಿರ್ವಹಿಸಿದ್ದ ಖರ್ಗೆ ಸರ್ಕಾರವನ್ನು ಹಲವಾರು ಬಾರಿ ಇಕ್ಕಟ್ಟಿಗೆ ಸಿಲುಕಿಸಿ
ದ್ದರು. ಈಗ ರಾಜ್ಯಸಭೆಯಲ್ಲೂ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಸಲು
ವಾಗಿ ಖರ್ಗೆ ಅವರನ್ನೇ ನೇಮಕ ಮಾಡಲಾಗುತ್ತಿದೆ ಎಂಬ ಮಾತುಗಳು ಕೇಳಿ
ಬರುತ್ತಿವೆ. ಆನಂದ್ ಶರ್ಮ, ದಿಗ್ವಿಜಯ ಸಿಂಗ್ ಅವರ ಹೆಸರುಗಳು
ಕೇಳಿಬಂದಿತ್ತಾದರೂ, ಕಡೆಗೆ ಕಾಂಗ್ರೆಸ್ ಹೈಕಮಾಂಡ್ ಖರ್ಗೆ ಅವರ ಹೆಸರನ್ನು
ಅಂತಿಮಗೊಳಿಸಿ ರಾಜ್ಯಸಭಾ ಸಭಾಧ್ಯಕ್ಷ, ಉಪರಾಷ್ಟ್ರಪತಿ ವೆಂಕಯ್ಯ
ನಾಯ್ಡು ಅವರಿಗೆ ಪತ್ರ ಬರೆದಿದೆ ಎಂದು ವರದಿಗಳು ಹೇಳಿವೆ.

13/2/21

